NR-85 GR-1200

ಕರ್ನಾಟಕ ಸರ್ಕಾರ

ಪೊಲೀಸ್ ಇಲಾಖೆ

ಸಂಖ್ಯೆ: 18/ಸಿಬ್ಬಂದಿ-6/ಸ್ಪೆ.ಆರ್‌ಪಿಸಿ-ನೇ/2025-26

ಅಪರ ಪೊಲೀಸ್ ಮಹಾ ನಿರ್ದೇಶಕರ ಕಛೇರಿ,
ಕರ್ನಾಟಕ ರಾಜ್ಯ ಮೀಸಲು ಪೊಲೀಸ್,
ನಂ.2, ನೃಪತುಂಗ ರಸ್ತೆ, ಬೆಂಗಳೂರು.
ದಿನಾಂಕ:15-10-2025.

## ಜ್ಞಾಪನ

ವಿಷಯ: ಕೆ.ಎಸ್.ಆರ್.ಪಿ. ಸ್ಪೆ.ಆರ್‌ಪಿಸಿ (ಸ್ಥಳಿಯೇತರ) 1500 ಹುದ್ದೆ (ಸ್ಥಳೀಯ ವೃಂದದ) 336 ಹುದ್ದೆಗಳನ್ನು ಮತ್ತು ಐ.ಆರ್.ಬಿ., ಮುನಿರಾಬಾದ್ ಘಟಕದ 166 ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ವರ್ಗೀಕರಣವನ್ನು ಕಳುಹಿಸುವ ಬಗ್ಗೆ.

ಉಲ್ಲೇಖ: ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ಇ-ಮೇಲ್ ಸಂದೇಶ ಸಂಖ್ಯೆ: 02/ನೇಮಕಾತಿ-5/2024-25 ದಿನಾಂಕ 14-10-2025.

ಕೆ.ಎಸ್.ಆರ್.ಪಿ. ಸ್ಪೆ.ಆರ್‌ಪಿಸಿ (ಪುರುಷ ಮತ್ತು ಮಹಿಳೆ) 1,500 ಹುದ್ದೆಗಳನ್ನು ಹಾಗೂ (ಸ್ಥಳೀಯ ವೃಂದದ) 336 ಹುದ್ದೆಗಳನ್ನು ಮತ್ತು ಐ.ಆರ್.ಬಿ., ಮುನಿರಾಬಾದ್ ಘಟಕದ 166 ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈಗಾಗಲೇ ತಮ್ಮ ಕಛೇರಿಯಿಂದ ಕಳುಹಿಸಲಾದ ನೇರ ಮತ್ತು ಸಮತಳ ವರ್ಗೀಕರಣದ ವಿವರವನ್ನು ಪಕ್ಕಕ್ಕಿರಿಸಿದೆ.

ಉಲ್ಲೇಖಿತ ಇ-ಸಂದೇಶದಲ್ಲಿ ಪೊಲೀಸ್ ಪ್ರಧಾನ ಕಛೇರಿಯ ಪತ್ರ ಸಂಖ್ಯೆ: 195/ಸಿಬ್ಬಂದಿ-1/2020-21 ದಿನಾಂಕ 13-10-2025ನ್ನು ಉಲ್ಲೇಖಿಸಿ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್ ವೃಂದಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ಕುರಿತು ಕೆಲವು ಅಂಶಗಳಿಗೆ ಸರ್ಕಾರದಿಂದ ಸ್ವೀಕೃತಗೊಂಡಿರುವ ಸ್ಪಷ್ಟೀಕರಣ ಹಾಗೂ ಆದೇಶಗಳಲ್ಲಿನ ನಿರ್ದೇಶನಗಳನ್ವಯ ಸಂಬಂಧಪಟ್ಟ ಘಟಕಗಳಿಂದ ವರ್ಗೀಕರಣವನ್ನು ಪಡೆದು ಪ್ರಸ್ತಾಪಿತ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮಕ್ಕಾಗಿ ಕೋರಲಾಗಿರುತ್ತದೆ (ಪ್ರತಿಗಳನ್ನು ಲಗತ್ತಿಸಿದೆ).

ಆದ್ದರಿಂದ, ಈಗಾಗಲೇ ತಮ್ಮ ಘಟಕಗಳಿಗೆ ಹಂಚಿಕೆ ಮಾಡಿರುವ ಹುದ್ದೆಗಳಂತೆ ಸಲ್ಲಿಸಲಾಗಿರುವ ನೇರ ಮತ್ತು ಸಮತಳ ವರ್ಗೀಕರಣವನ್ನು ಪೊಲೀಸ್ ಪ್ರಧಾನ ಕಛೇರಿಯ ಪತ್ರ ದಿನಾಂಕ 13-10-2025ರಲ್ಲಿ ನೀಡಿರುವ ನಿರ್ದೇಶನದನ್ವಯ ಮಾರ್ಪಡಿಸಿ ನೇರ ಮತ್ತು ಸಮತಳ ವರ್ಗೀಕರಣವನ್ನು (ಪ್ರಶಂಸನೀಯ ಕ್ರೀಡಾಪಟುಗಳ ವರ್ಗೀಕರಣವನ್ನು ಒಳಗೊಂಡಂತೆ) ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ 149 ಪಿಪಿಎ 2025 ದಿನಾಂಕ 10-10-2025ರಲ್ಲಿ ಪ್ರತಿಯೊಂದು ನೇರ ಮೀಸಲಾತಿ ವರ್ಗದಡಿ ಶೇಕಡಾ 3% ರಷ್ಟು ಮೀಸಲಾತಿ ನಿಗದಿಪಡಿಸಿರುವಂತೆ ಮರು ಪ್ರಸ್ತಾವನೆಯನ್ನು ಈ ಕಛೇರಿಯ ಇ-ಮೇಲ್ ಐಡಿ: est6ksrphq@ksp.gov.in ಗೆ ದಿನಾಂಕ 16-10-2025ರೊಳಗಾಗಿ ಮರು ಸಂದೇಶದಲ್ಲಿ ಕಳುಹಿಸಿಕೊಡುವಂತೆ ಸೂಚಿಸಿದೆ.

15/10

(ಸಂದೀಪ್ ಪಾಟೀಲ್, ಐಪಿಎಸ್)
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಪ್ರಭಾರ),
ಕೆ.ಎಸ್.ಆರ್.ಪಿ., ಬೆಂಗಳೂರು.

ಇವರಿಗೆ,

1) ಕಮಾಂಡೆಂಟ್, 1, 3, 4 ಮತ್ತು 9ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು.
2) ಕಮಾಂಡೆಂಟ್, 2, 5, 6, 7, 8, 11, 12ನೇ ಪಡೆ, ಕೆ.ಎಸ್.ಆರ್.ಪಿ., ಬೆಳಗಾವಿ, ಮೈಸೂರು, ಕಲಬುರಗಿ, ಮಂಗಳೂರು, ಶಿವಮೊಗ್ಗ, ಹಾಸನ, ತುಮಕೂರು.
3) ಕಮಾಂಡೆಂಟ್, ಐ.ಆರ್.ಬಿ., ಮುನಿರಾಬಾದ್.

ಪ್ರತಿ: ಮೇಲ್ವಿಚಾರಕರು, ನಿಸ್ತಂತು, 1ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು ರವರಿಗೆ ಮಾಹಿತಿ ಶೀಘ್ರ ಪ್ರಸರಣಕ್ಕಾಗಿ.

KSRP MASTER CONTROL ROOM
I BN NO.60 RICHMOND ROAD
BENGALURU - 25
IN/OUT NO 85
Time 1210 HRS
Date 15/10/2025
Signature

ಅನುಬಂಧ-A

ಸ್ಪೆ.ಆರ್.ಪಿಸಿ (ಪುರುಷ) ಮಿಕ್ಕುಳಿದ ವೃಂದದ ನೇಮಕಾತಿ ಹುದ್ದೆಗಳು

| ಕ್ರ.ಸಂ | ಪಡೆ | ಒಟ್ಟು | ಹಂಚಿಕೆ ಮಾಡಲಾದ ಹುದ್ದೆಗಳು | |
|---|---|---|---|---|
| | | | ಸಾಮಾನ್ಯ | ಕ್ರೀಡೆ |
| 1 | 1ನೇ ಪಡೆ, ಬೆಂಗಳೂರು | 134 | 130 | 04 |
| 2 | 2ನೇ ಪಡೆ, ಬೆಳಗಾವಿ | 140 | 136 | 04 |
| 3 | 3ನೇ ಪಡೆ, ಬೆಂಗಳೂರು | 113 | 110 | 03 |
| 4 | 4ನೇ ಪಡೆ, ಬೆಂಗಳೂರು | 134 | 130 | 04 |
| 5 | 5ನೇ ಪಡೆ, ಮೈಸೂರು | 103 | 100 | 03 |
| 6 | 7ನೇ ಪಡೆ, ಮಂಗಳೂರು | 335 | 325 | 10 |
| 7 | 8ನೇ ಪಡೆ, ಶಿವಮೊಗ್ಗ | 120 | 116 | 04 |
| 8 | 9ನೇ ಪಡೆ, ಬೆಂಗಳೂರು | 75 | 73 | 02 |
| 9 | 11ನೇ ಪಡೆ, ಹಾಸನ | 135 | 131 | 04 |
| 10 | 12ನೇ ಪಡೆ, ತುಮಕೂರು | 135 | 131 | 04 |
| | ಒಟ್ಟು | **1424** | **1382** | **42** |

ಸ್ಪೆ.ಆರ್.ಪಿಸಿ (ಮಹಿಳೆ) ಮಿಕ್ಕುಳಿದ ವೃಂದದ ನೇಮಕಾತಿ ಹುದ್ದೆಗಳು

| ಕ್ರ.ಸಂ | ಪಡೆ | ಒಟ್ಟು | ಹಂಚಿಕೆ ಮಾಡಲಾದ ಹುದ್ದೆಗಳು | |
|---|---|---|---|---|
| | | | ಸಾಮಾನ್ಯ | ಕ್ರೀಡೆ |
| 1 | 2ನೇ ಪಡೆ, ಬೆಳಗಾವಿ | 23 | 22 | 01 |
| 2 | 4ನೇ ಪಡೆ, ಬೆಂಗಳೂರು | 28 | 27 | 01 |
| 3 | 5ನೇ ಪಡೆ, ಮೈಸೂರು | 25 | 24 | 01 |
| | ಒಟ್ಟು | **76** | **73** | **03** |

| | | | |
|---|---|---|---|
| ಮಿಕ್ಕುಳಿದ ವೃಂದದ ಪುರುಷ ಮತ್ತು ಮಹಿಳೆ ಸೇರಿ ಒಟ್ಟು | **1500** | **1455** | **45** |

ಅನುಬಂಧ-B

ಸ್ಪೆ.ಆರ್.ಪಿಸಿ (ಪುರುಷ) ಕಲ್ಯಾಣ-ಕರ್ನಾಟಕ ವೃಂದದ ನೇಮಕಾತಿ ಹುದ್ದೆಗಳು

| ಕ್ರ.ಸಂ | ಪಡೆ | ಒಟ್ಟು | ಹಂಚಿಕೆ ಮಾಡಲಾದ ಹುದ್ದೆಗಳು | |
|---|---|---|---|---|
| | | | ಸಾಮಾನ್ಯ | ಕ್ರೀಡೆ |
| 1 | 1ನೇ ಪಡೆ, ಬೆಂಗಳೂರು | 33 | 32 | 01 |
| 2 | 3ನೇ ಪಡೆ, ಬೆಂಗಳೂರು | 34 | 33 | 01 |
| 3 | 4ನೇ ಪಡೆ, ಬೆಂಗಳೂರು | 33 | 32 | 01 |
| 4 | 6ನೇ ಪಡೆ, ಕಲಬುರಗಿ | 180 | 175 | 05 |
| 5 | 9ನೇ ಪಡೆ, ಬೆಂಗಳೂರು | 33 | 32 | 01 |
| | ಒಟ್ಟು | **313** | **304** | **09** |

ಸ್ಪೆ.ಆರ್.ಪಿಸಿ (ಮಹಿಳೆ) ಕಲ್ಯಾಣ-ಕರ್ನಾಟಕ ವೃಂದದ ನೇಮಕಾತಿ ಹುದ್ದೆಗಳು

| ಕ್ರ.ಸಂ | ಪಡೆ | ಒಟ್ಟು | ಹಂಚಿಕೆ ಮಾಡಲಾದ ಹುದ್ದೆಗಳು | |
|---|---|---|---|---|
| | | | ಸಾಮಾನ್ಯ | ಕ್ರೀಡೆ |
| 1 | 4ನೇ ಪಡೆ, ಬೆಂಗಳೂರು | 12 | 12 | 0 |
| 2 | 6ನೇ ಪಡೆ, ಕಲಬುರಗಿ | 41 | 40 | 01 |
| | ಒಟ್ಟು | **53** | **52** | **01** |

| | | | |
|---|---|---|---|
| ಕಲ್ಯಾಣ-ಕರ್ನಾಟಕ ವೃಂದದ ಪುರುಷ ಮತ್ತು ಮಹಿಳೆ ಸೇರಿ ಒಟ್ಟು | **366** | **356** | **10** |

ಅನುಬಂಧ-B

ಸ್ಪೆ.ಆರ್.ಪಿಸಿ (ಪುರುಷ) ಕಲ್ಯಾಣ-ಕರ್ನಾಟಕ ಭಾರತ ಮೀಸಲು ಪಡೆ ಮುನಿರಾಬಾದ್ ವೃಂದದ ನೇಮಕಾತಿ ಹುದ್ದೆಗಳು

| ಕ್ರ.ಸಂ | ಪಡೆ | ಒಟ್ಟು | ಹಂಚಿಕೆ ಮಾಡಲಾದ ಹುದ್ದೆಗಳು | |
|---|---|---|---|---|
| | | | ಸಾಮಾನ್ಯ | ಕ್ರೀಡೆ |
| 1 | ಭಾರತ ಮೀಸಲು ಪಡೆ ಮುನಿರಾಬಾದ್ | 166 | 161 | 05 |

**ನೇಮಕಾತಿ ಜರೂರು**

# ಟಿ.ಪಿ./ಫ್ಯಾಕ್ಸ್ /ಇ-ಮೇಲ್ ಸಂದೇಶ

ಗೆ :
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ, ಬೆಂಗಳೂರು.
ಪ್ರತಿಯನ್ನು ಅಭಿನಂದನೆಗಳೊಂದಿಗೆ:-
ಡೈರೆಕ್ಟರ್ ಜನರಲ್ & ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.
ಇಂದ : ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು.

---

ಸಂಖ್ಯೆ.:02/ನೇಮಕಾತಿ-5/2024-25, ದಿನಾಂಕ:14.10.2025.

---

ಪೊಲೀಸ್ ಪ್ರಧಾನ ಕಛೇರಿಯ ಪತ್ರ ಸಂಖ್ಯೆ: 195/ಸಿಬ್ಬಂದಿ-1/2020-21, ದಿನಾಂಕ: 04.09.2025 ರಲ್ಲಿ ಸ್ಪೆ.ಆರ್.ಪಿ.ಸಿ (ಕೆ.ಎಸ್.ಆರ್.ಪಿ) ಮಿಕ್ಕುಳಿದ ವೃಂದದ-1500 ಹುದ್ದೆಗಳು ಮತ್ತು ಸ್ಪೆ.ಆರ್.ಪಿ.ಸಿ (ಕೆ.ಎಸ್.ಆರ್.ಪಿ & ಐ.ಆರ್.ಬಿ) ಸ್ಥಳೀಯ ವೃಂದದ-532 ಹುದ್ದೆಗಳು (ಪ್ರಶಂಸನೀಯ ಕ್ರೀಡಾಪಟುಗಳ ಹುದ್ದೆಗಳ ಮೀಸಲಾತಿ ಸೇರಿದಂತೆ) ಒಟ್ಟು ಸೇರಿ 2032 ಹುದ್ದೆಗಳಿಗೆ ಸಂಬಂಧಪಟ್ಟ ಘಟಕಗಳಿಂದ ನೇರ ಮತ್ತು ಸಮತಳ ವರ್ಗೀಕರಣವನ್ನು ಪಡೆದು ನೇರ ನೇಮಕಾತಿ ಮೂಲಕ ಭರ್ತಿಮಾಡುವಂತೆ ಕೋರಲಾಗಿರುತ್ತದೆ.

ಈ ಸಂಬಂಧ ತಮ್ಮ ಕಛೇರಿಯ ಪತ್ರ ಸಂಖ್ಯೆ:18/ಸಿಬ್ಬಂದಿ-6/ಸ್ಪೆ.ಆರ್.ಪಿ.ಸಿ-ನೇ/2025-26, ದಿನಾಂಕ: 23.09.2025 ರಲ್ಲಿ ಪ್ರಶಂಸನೀಯ ಕ್ರೀಡಪಟುಗಳ ಮೀಸಲಾತಿ ಹುದ್ದೆಗಳನ್ನು ಹೊರತುಪಡಿಸಿ ಘಟಕವಾರು ನೇರ ಮತ್ತು ಸಮತಳ ವರ್ಗೀಕರಣವನ್ನು ಅನುಬಂಧದಲ್ಲಿ ಲಗತ್ತಿಸಿ ಕಳುಹಿಸಿರುತ್ತೀರಿ.

ಪೊಲೀಸ್ ಪ್ರಧಾನ ಕಛೇರಿಯ ಪತ್ರ ಸಂಖ್ಯೆ: 195/ಸಿಬ್ಬಂದಿ-1/2020-21 (ಭಾಗ-3), ದಿನಾಂಕ: 13.10.2025 ರಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು ಪೊಲೀಸ್ ಕಾನ್ಸ್‌ಟೇಬಲ್ ವೃಂದಗಳಲ್ಲಿನ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಕುರಿತು ಕೆಲವು ಅಂಶಗಳಿಗೆ ಸರ್ಕಾರದಿಂದ ಸ್ವೀಕೃತಗೊಂಡಿರುವ ಸ್ಪಷ್ಟೀಕರಣ ಹಾಗೂ ಆದೇಶಗಳಲ್ಲಿನ ನಿರ್ದೇಶನಗಳನ್ವಯ ಸಂಬಂಧಪಟ್ಟ ಘಟಕಗಳಿಂದ ವರ್ಗೀಕರಣವನ್ನು ಪಡೆದು ಪ್ರಸ್ತಾಪಿತ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿಮಾಡಲು ಕ್ರಮವಹಿಸುವಂತೆ ಕೋರಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ಆದ್ದರಿಂದ, ಈಗಾಗಲೇ ತಮ್ಮ ಕಛೇರಿಯ ಪತ್ರ ದಿನಾಂಕ: 23.09.2025 ರಲ್ಲಿ ಸಲ್ಲಿಸಿರುವ ನೇರ ಮತ್ತು ಸಮತಲ ವರ್ಗೀಕರಣವನ್ನು ಪೊಲೀಸ್ ಪ್ರಧಾನ ಕಛೇರಿಯ ಪತ್ರ ದಿನಾಂಕ: 13.10.2025ರಲ್ಲಿ ನೀಡಿರುವ ನಿರ್ದೇಶನದನ್ವಯ ಮಾರ್ಪಡಿಸಿ, ನೇರ ಮತ್ತು ಸಮತಳ ವರ್ಗೀಕರಣವನ್ನು (ಪ್ರಶಂಸನೀಯ ಕ್ರೀಡಾಪಟುಗಳ ವರ್ಗೀಕರಣವನ್ನು ಒಳಗೊಂಡಂತೆ) ದಿನಾಂಕ: 17.10.2025 ಪೂರ್ವಾಹ್ನದೊಳಗೆ ಈ ಕಛೇರಿಯ ಇ-ಮೇಲ್ ಐಡಿ ssrnt@ksp.gov.in ಕ್ಕೆ ಕಳುಹಿಸಿಕೊಡಲು ಈ ಮೂಲಕ ಕೋರಿದೆ.

---

(ಎಂ.ಎನ್ ಅನುಚೇತ್, ಐ.ಪಿ.ಎಸ್.,)
ಡಿ.ಐ.ಜಿ.ಪಿ. (ನೇಮಕಾತಿ) ಹಾಗೂ ಸಮನ್ವಯಾಧಿಕಾರಿ,
ಪಿಸಿ (ಕೆ.ಎಸ್.ಆರ್.ಪಿ) ನೇಮಕಾತಿ ಸಮಿತಿ,
ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ಬೆಂಗಳೂರು ರವರ ಪರವಾಗಿ.

ಪ್ರತಿಯನ್ನು:-
ಉಸ್ತುವಾರಿ ಅಧಿಕಾರಿ, ಟಿ.ಪಿ. ವಿಭಾಗ, ಸಿ.ಓ.ಡಿ. ಕಛೇರಿ, ಬೆಂಗಳೂರು ರವರಿಗೆ ತುರ್ತು ರವಾನೆಗಾಗಿ.

NB
711

GB
950

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಾರ್ಯಾಲಯ
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ,
ಬೆಂಗಳೂರು - 560001.

(1)

**ಕರ್ನಾಟಕ ಸರ್ಕಾರ**
**(ಪೊಲೀಸ್ ಇಲಾಖೆ)**
**ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ,**
**ಕರ್ನಾಟಕ ರಾಜ್ಯ, ನಂ.02, ನೃಪತುಂಗ ರಸ್ತೆ, ಬೆಂಗಳೂರು – 560001**

ಕಡತ ಸಂಖ್ಯೆ:195/ಸಿಬ್ಬಂದಿ-1/2020-21(ಭಾಗ-3) ದಿನಾಂಕ:13.10.2025

ಇವರಿಗೆ,

ಪೊಲೀಸ್ ಮಹಾನಿರ್ದೇಶಕರು,
ನೇಮಕಾತಿ,
**ಬೆಂಗಳೂರು.**

ಮಾನ್ಯರೇ,

ವಿಷಯ: ಪೊಲೀಸ್ ಇಲಾಖೆಯ ನೇಮಕಾತಿಯ ಕುರಿತು.

ಉಲ್ಲೇಖ:
1) ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ 149 ಪಿಪಿಎ 2025 ದಿನಾಂಕ:10.10.2025
2) ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:15.09.2025
3) ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:04.09.2025 ಮತ್ತು 10.10.2025

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪೊಲೀಸ್ ಇಲಾಖೆಯ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ವೃಂದಗಳಲ್ಲಿನ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳ ಕುರಿತು ಸರ್ಕಾರದ ಸ್ಪಷ್ಟೀಕರಣ/ನಿರ್ದೇಶನವನ್ನು ಕೋರಲಾಗಿದ್ದು, ಅದರಂತೆ ಸರ್ಕಾರದಿಂದ ಈ ಕೆಳಕಂಡ ಪತ್ರ/ ಆದೇಶಗಳಲ್ಲಿ ಸ್ಪಷ್ಟೀಕರಣ ಸ್ವೀಕೃತಗೊಂಡಿರುತ್ತದೆ.

| ಕ್ರ.ಸಂ | ವಿಷಯ | ಸರ್ಕಾರದ ಪತ್ರ ವಿವರ |
|---|---|---|
| 01 | ಪೊಲೀಸ್ ಇಲಾಖೆಯ ನೇರ ನೇಮಕಾತಿಯಲ್ಲಿ ಸಮತಳ ಮೀಸಲಾತಿಯನ್ನು ಅಳವಡಿಸಬೇಕಾಗಿರುವ ಅನುಕ್ರಮದ ಕುರಿತು. | ಸರ್ಕಾರದ ಪತ್ರ ಸಂಖ್ಯೆ:ಹೆಚ್‌ಡಿ 108/ಪಿಇಐ2025 ದಿನಾಂಕ:10.10.2025 ರಲ್ಲಿ ತಿಳಿಸಿರುವಂತೆ ಈ ಕೆಳಕಂಡ ಅನುಕ್ರಮದಲ್ಲಿ ನೇರ ಹಾಗೂ ಸಮತಳ ಮೀಸಲಾತಿಯನ್ನು ಅಳವಡಿಸಲು ಕ್ರಮ ವಹಿಸುವುದು. (see table below) *ತೃತೀಯ ಲಿಂಗದ ಮೀಸಲಾತಿ ಅನ್ವಯವಾಗುವ ಹುದ್ದೆಗಳಿಗೆ ಮಾತ್ರ |
| 02 | ಪೊಲೀಸ್ ಇಲಾಖೆಯಲ್ಲಿನ ಕೆಎಸ್‌ಆರ್‌ಪಿ (ಐಆರ್‌ಬಿ ಒಳಗೊಂಡಂತೆ) ಸಶಸ್ತ್ರ ಮೀಸಲು (ಕೆಎಆರ್‌ಪಿ ಒಳಗೊಂಡಂತೆ) ಹಾಗೂ ಕೆಎಸ್‌ಐಎಸ್‌ಎಫ್‌ನ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಹುದ್ದೆಗಳಿಗೆ ಮಾತ್ರ ತೃತೀಯ ಲಿಂಗದ ಅಭ್ಯರ್ಥಿಗಳ ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಯ ಮಾನದಂಡ. | ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 155 ಪಿಪಿಎ 2024 ದಿನಾಂಕ:10.10.2025ರಲ್ಲಿ ನಿಗಧಿಪಡಿಸಿರುವ ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಯ ಮಾನದಂಡವನ್ನು ಅಳವಡಿಸಿಕೊಳ್ಳುವುದು. (ಅನ್ವಯವಾಗುವ ಹುದ್ದೆಗಳಿಗೆ ಮಾತ್ರ) |
| 03 | ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿನ ನೇಮಕಾತಿಯಲ್ಲಿ ಪ್ರಶಂಸನೀಯ ಕ್ರೀಡಾಪಟುಗಳನ್ನು ನೇಮಕಾತಿ ಮಾಡಿಕೊಳ್ಳಲು ಪೂರಕವಾಗುವಂತೆ ಸಮತಳ ಮೀಸಲಾತಿಯಲ್ಲಿ ರೋಸ್ಟರ್ ಬಿಂದುಗಳನ್ನು ನಿಗಧಿಪಡಿಸುವ ಕುರಿತು | ಪ್ರಶಂಸನೀಯ ಕ್ರೀಡಾ ಪಟುಗಳಿಗೆ ನೀಡಿರುವ ಮೀಸಲಾತಿಯು ಪ್ರತಿಯೊಂದು ನೇರ ಮೀಸಲಾತಿಯ ವರ್ಗದಡಿ 3% ಸಮತಳ ಮೀಸಲಾತಿಯಾಗಿರುವುದರಿಂದ ಮತ್ತೊಂದು ಸಮತಳ ಮೀಸಲಾತಿಯನ್ನು ಅನ್ವಯಿಸುವ ಅವಶ್ಯಕತೆ ಇರುವುದಿಲ್ಲವೆಂದು ಸರ್ಕಾರದ ಪತ್ರ ಸಂಖ್ಯೆ:ಹೆಚ್‌ಡಿ 149 ಪಿಪಿಎ 2025 ದಿನಾಂಕ:10.10.2025ರಲ್ಲಿ ಸ್ಪಷ್ಟೀಕರಿಸಲಾಗಿರುತ್ತದೆ. |

Table in item 01:

| ಪ್ರವರ್ಗ | [illegible] | [illegible] | [illegible] | [illegible] | [illegible] | ತೃ.ಲಿಂ.* |
|---|---|---|---|---|---|---|
| ಪ್ರವರ್ಗ-I | | | | | | |
| ಪ್ರವರ್ಗ-IIಎ | | | | | | |
| ಪ್ರವರ್ಗ-IIಬಿ | | | | | | |
| ಪ್ರವರ್ಗ-IIIಎ | | | | | | |
| ಪ್ರವರ್ಗ-IIIಬಿ | | | | | | |
| ಎಸ್‌ಸಿ- (ಪ್ರವರ್ಗ-ಎ) | | | | | | |
| ಎಸ್‌ಸಿ- (ಪ್ರವರ್ಗ-ಬಿ) | | | | | | |
| ಎಸ್‌ಸಿ- (ಪ್ರವರ್ಗ-ಸಿ) | | | | | | |
| ಎಸ್‌ಟಿ | | | | | | |
| ಸಾಮಾನ್ಯ | | | | | | |

ಉಳಿದಂತೆ ಪರಿಶಿಷ್ಟ ಜಾತಿಯಲ್ಲಿ ಪ್ರಸ್ತುತ ರಿಕ್ತವಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಪರಿಶಿಷ್ಟ ಜಾತಿಯ ಪ್ರವರ್ಗ ಎ,ಬಿ ಮತ್ತು ಸಿ ವರ್ಗಗಳಿಗೆ ಯಾವ ಪ್ರವರ್ಗದಿಂದ ಭರ್ತಿಮಾಡಬೇಕು ಎಂಬುದರ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಸ್ಪಷ್ಟೀಕರಣ ಬಾಕಿಯಿರುವುದಾಗಿ ತಿಳಿಸಲಾಗಿರುತ್ತದೆ.

ಆದ್ದರಿಂದ, ಸರ್ಕಾರದ ಮೇಲ್ಕಂಡ ಆದೇಶ ಹಾಗೂ ಪತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ ಹಾಗೂ ಸರ್ಕಾರದ ಆದೇಶ ಹಾಗೂ ಪತ್ರಗಳಲ್ಲಿ ನೀಡಿರುವ ನಿರ್ದೇಶನಗಳನ್ವಯ ಈ ಕಛೇರಿಯ ಉಲ್ಲೇಖ-4ರ ಪತ್ರಗಳಲ್ಲಿ ಪ್ರಸ್ತಾಪಿಸಿರುವ ಹುದ್ದೆಗಳಿಗೆ ಸಂಬಂಧಪಟ್ಟ ಘಟಕಗಳಿಂದ ವರ್ಗೀಕರಣವನ್ನು ಪಡೆದು ಪ್ರಸ್ತಾಪಿತ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿಮಾಡಲು ಕ್ರಮವಹಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

13/10/2025

(ಸೌಮೇಂದು ಮುಖರ್ಜಿ, ಐಪಿಎಸ್)
ಎ.ಡಿ.ಜಿ.ಪಿ(ಆಡಳಿತ)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಪರವಾಗಿ

ಪ್ರತಿ: ಎಲ್ಲಾ ಘಟಕಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

DGP CONTROL ROOM, BENGALURU
O/o. the DG & IGP, N.T.Road, B'luru-1
Out Messages Received for Transmission
NR No. 794 THI 1800
Date 13/10/25 Sign. [illegible]

# ಕರ್ನಾಟಕ ಸರ್ಕಾರ

ಸಂಖ್ಯೆ:ಹೆಚ್‌ಡಿ 149 ಪಿಪಿಎ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಡಾ: ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ: 10.10.2025

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ವಿಧಾನಸೌಧ, ಬೆಂಗಳೂರು

ಇವರಿಗೆ,

ಮಹಾ ನಿರ್ದೇಶಕರು
ಮತ್ತು ಆರಕ್ಷಕ ಮಹಾ ನಿರೀಕ್ಷಕರು,
ಕರ್ನಾಟಕ ರಾಜ್ಯ
ಪೊಲೀಸ್ ಪ್ರಧಾನ ಕಛೇರಿ,
ನಂ.2, ನೃಪತುಂಗ ರಸ್ತೆ, ಬೆಂಗಳೂರು-01

ಮಾನ್ಯರೇ,

**ವಿಷಯ:** ಪೊಲೀಸ್ ಇಲಾಖೆಯ ನೇರ ನೇಮಕಾತಿಯ ಕುರಿತು.

**ಉಲ್ಲೇಖ:** ತಮ್ಮ ಪತ್ರ ಸಂಖ್ಯೆ: ಹೆಚ್‌ಆರ್‌ಎಂ-2(1)/97/2024-25, ದಿನಾಂಕ:15-09-2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆಗೆ ಗಮನ ಸೆಳೆಯಲಾಗಿದೆ. ಈ ಪತ್ರದಲ್ಲಿ ಪೊಲೀಸ್ ಇಲಾಖೆಯ ನೇರ ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣ ಹಾಗೂ ನಿರ್ದೇಶನ ನೀಡುವಂತೆ ಕೋರಲಾಗಿತ್ತು.

(1) ಪೊಲೀಸ್ ಇಲಾಖೆಯ ನೇಮಕಾತಿಯಲ್ಲಿ ಯಾವ ಸಮತಳ ಮೀಸಲಾತಿಯಲ್ಲಿ ಆದ್ಯತೆ ನೀಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಮೀಸಲಾತಿಯ ಅನುಕ್ರಮ ಯಾವ ರೀತಿ ಇರಬೇಕು ಎಂಬ ಕುರಿತು.

(2) ತೃತೀಯ ಲಿಂಗದ ಅಭ್ಯರ್ಥಿಗಳನ್ನು ನೇಮಕ ಮಾಡಲು ಪೂರಕವಾಗುವಂತೆ ಪ್ರತ್ಯೇಕವಾಗಿ ದೇಹದಾರ್ಢ್ಯತೆ ಹಾಗೂ ಸಹಿಷ್ಣತೆ ಪರೀಕ್ಷೆಗಳ ಮಾನದಂಡವನ್ನು ರೂಪಿಸಲು ಹಾಗೂ ಸದರಿ ನಿಯಮಾವಳಿಗಳನ್ನು ರೂಪಿಸುವವರೆಗೂ ಅಥವಾ ಕುರಿತು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಮಾಡುವವರೆಗೂ ನೇಮಕಾತಿಗೆ ಅನುಮೋದನೆ ಆಗಿರುವ ಹುದ್ದೆಗಳಿಗೆ ತೃತೀಯ ಲಿಂಗದ ಮೀಸಲಾತಿಯನ್ನು ಅಳವಡಿಸದೇ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವ ಕುರಿತು.

(3) ಪರಿಶಿಷ್ಟ ಜಾತಿಯಲ್ಲಿ ಪ್ರಸ್ತುತ ರಿಕ್ತವಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಪರಿಶಿಷ್ಟ ಜಾತಿಯ ಪ್ರವರ್ಗ ಎ, ಬಿ ಮತ್ತು ಸಿ ವರ್ಗಗಳಿಗೆ ರೋಸ್ಟರ್ ಆಧಾರದ ಆದ್ಯತೆ ಮೇಲೆ ಅಥವಾ ನಿರ್ದಿಷ್ಟವಾಗಿ ಯಾವ ಪ್ರವರ್ಗದವರಿಂದ ಭರ್ತಿ ಮಾಡಬೇಕು ಎಂಬುದರ ಕುರಿತು.

(4) ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿನ ನೇಮಕಾತಿಯಲ್ಲಿ ಪ್ರಶಂಸನೀಯ ಕ್ರೀಡಾಪಟುಗಳನ್ನು ನೇಮಕಾತಿ ಮಾಡಿಕೊಳ್ಳಲು ಪೂರಕವಾಗುವಂತೆ ಅಂಗವೈಕಲ್ಯ ಅಭ್ಯರ್ಥಿಗಳಿಗೆ ಮೀಸಲಿಟ್ಟಿರುವ ರೋಸ್ಟರ್ ಬಿಂದುಗಳಲ್ಲಿ 24, 64 ಮತ್ತು 84ರಲ್ಲಿರುವ ಬಿಂದುಗಳನ್ನು ಪ್ರಶಂಸನೀಯ ಕ್ರೀಡಾಪಟುಗಳಿಗೆ ಹಂಚಿಕೆ ಮಾಡುವ ಕುರಿತು.

ಮೇಲ್ಕಂಡ ಅಂಶ (1) ಕ್ಕೆ ಸ್ಪಷ್ಟೀಕರಣವನ್ನು ದಿನಾಂಕ:10-10-2025 ರ ಪತ್ರ ಸಂಖ್ಯೆ: ಹೆಚ್‌ಡಿ 108 ಪಿಇಐ 2025 ರಲ್ಲಿ ನೀಡಲಾಗಿದೆ. ಅಂಶ(2) ಕ್ಕೆ ಆದೇಶವನ್ನು ಹೊರಡಿಸಲಾಗುತ್ತಿದೆ. ಅಂಶ (4) ಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಸ್ಪಷ್ಟೀಕರಣ ನಿರೀಕ್ಷಿಸಲಾಗಿದೆ.

ಅಂಶ (3) ಕ್ಕೆ ಸಂಬಂಧಿಸಿದಂತೆ ಪ್ರಶಂಸನೀಯ ಕ್ರೀಡಾಪಟುಗಳಿಗೆ ನೀಡಿರುವ ಮೀಸಲಾತಿಯು ಪ್ರತಿಯೊಂದು ನೇರ ಮೀಸಲಾತಿಯ ವರ್ಗದಡಿ 3% ಸಮತಳ ಮೀಸಲಾತಿಯಾಗಿದೆ. ಆದ್ದರಿಂದ ಮತ್ತೊಂದು ಸಮತಳ ಮೀಸಲಾತಿಯಾದ ಅಂಗವಿಕಲ ಮೀಸಲಾತಿ ಅನ್ವಯಿಸುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಲು ನಿರ್ದೇಶಿಸಲಟ್ಟಿದ್ದೇನೆ.

ತಮ್ಮ ನಂಬುಗೆಯ,

Shyama Holla. 10/10/25

(ಜಿ. ಶ್ಯಾಮ ಹೊಳ್ಳ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊ.ಸೇ -ಬಿ)

10

ಕರ್ನಾಟಕ ಸರ್ಕಾರ

ಸಂಖ್ಯೆ: HD/108/PEI / 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು ದಿನಾಂಕ 10-10-2025

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ಬೆಂಗಳೂರು.

ಇವರಿಗೆ,
ಮಹಾ ನಿರ್ದೇಶಕರು ಮತ್ತು
ಆರಕ್ಷಕ ಮಹಾ ನಿರೀಕ್ಷಕರು,
ಪೊಲೀಸ್ ಪ್ರಧಾನ ಕಛೇರಿ,
ನೃಪತುಂಗ ರಸ್ತೆ,
ಬೆಂಗಳೂರು-560001.

ಮಾನ್ಯರೇ,

ವಿಷಯ: ಪೊಲೀಸ್ ನೇಮಕಾತಿಯಲ್ಲಿ ಸಮತಳ ಮೀಸಲಾತಿ ಅನ್ವಯಿಸುವ ಕುರಿತು.

ಉಲ್ಲೇಖ: ತಮ್ಮ ಕಛೇರಿಯ ಪತ್ರ ಸಂಖ್ಯೆ: ಹೆಚ್‌ಆರ್‌ಎಂ-2(1)/97/2024-25, ದಿನಾಂಕ 05.04.2025

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೇರ ನೇಮಕಾತಿಯ ಪ್ರತಿ ಸಂದರ್ಭದಲ್ಲಿ ನೇರ ನೇಮಕಾತಿಗೆ ಲಭ್ಯವಾಗುವ ರಿಕ್ತಸ್ಥಾನಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಾದ ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿ ಗಳಿಗೆ ವಿಂಗಡಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ 28.12.2022 ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022 ರ ಅನುಬಂಧದಲ್ಲಿ 100 ಬಿಂದುಗಳ ರೋಸ್ಟರ್ ಅನ್ನು ನಿಗದಿಪಡಿಸಲಾಗಿರುತ್ತದೆ ಈ ರೀತಿ, ನೇರ ಮೀಸಲಾತಿ (vertical reservation) ಗೆ ಸಂಬಂಧಿಸಿದಂತೆ ಪ್ರತಿಯೊಂದು ವರ್ಗಕ್ಕೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತಸ್ಥಾನಗಳನ್ನು ವರ್ಗೀಕರಣ ಮಾಡಿದ ನಂತರ ಸಮತಳ ಮೀಸಲಾತಿಗಳಾದ 1) ಮಾಜಿ ಸೈನಿಕರು, (2) ಅಂಗವಿಕಲರು, (3) ಮಹಿಳೆಯರು, (4) ಯೋಜನೆಗಳಿಂದ ನಿರ್ವಸಿತರಾದವರು, (5) ಗ್ರಾಮೀಣ ಅಭ್ಯರ್ಥಿಗಳು, (6) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರು ಮತ್ತು (7) ತೃತೀಯ ಲಿಂಗದ ಅಭ್ಯರ್ಥಿಗಳಿಗೆ ರಿಕ್ತಸ್ಥಾನಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ 08.03.2023 ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2023 ರ ಅನುಬಂಧದಲ್ಲಿ 100 ಬಿಂದುಗಳ ರೋಸ್ಟರ್ ಅನ್ನು ನಿಗದಿಪಡಿಸಲಾಗಿರುತ್ತದೆ. ಆಯ್ಕೆ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ದಿನಾಂಕ 08.03.2023 ರ ಸದರಿ ಆದೇಶದ ಅನುಬಂಧದಲ್ಲಿ ಸಮತಳ ಮೀಸಲಾತಿಗೆ ಸಂಬಂಧಿಸಿದಂತೆ ಗೊತ್ತುಪಡಿಸಿರುವ ರೋಸ್ಟರ್ ಬಿಂದುಗಳ ಆದ್ಯತಾ ಕ್ರಮದಲ್ಲಿಯೇ ಸಮತಳ ಮೀಸಲಾತಿಗೆ ಅಭ್ಯರ್ಥಿಗಳನ್ನು ಪರಿಗಣಿಸಿ, ಅವರುಗಳ ಅರ್ಹತೆಯ (relative merit) ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಬೇಕಾಗುತ್ತದೆ.

ಮುಂದುವರೆದು, ದಿನಾಂಕ:28.10.2024ರ ಪೂರ್ವದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅಧಿಸೂಚನೆ ಹೊರಡಿಸಿ, ಯಾವುದೇ ತಿದ್ದುಪಡಿ ಅಧಿಸೂಚನೆ ಹೊರಡಿಸದಿದ್ದರೆ ಅಂತಹ ನೇಮಕಾತಿಗಳನ್ನು ದಿನಾಂಕ.28.12.2022ರ ಸರ್ಕಾರದ ಆದೇಶದಂತೆ ರೋಸ್ಟರ್ ಪಾಲನೆ ಮಾಡಿ ಮುಂದುವರೆಸುವಂತೆ ಹಾಗೂ ಹೊಸದಾಗಿ ಅಧಿಸೂಚನೆ ಹೊರಡಿಸಬೇಕಾದಲ್ಲಿ ದಿನಾಂಕ: 10.09.2025 ಸರ್ಕಾರದ ಸುತ್ತೋಲೆಯಂತೆ ಒಳಮೀಸಲಾತಿ ಅಳವಡಿಸಿಕೊಂಡು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಪೊಲೀಸ್ ಇಲಾಖೆಯ ನೇಮಕಾತಿಗೆ ತೃತೀಯ ಲಿಂಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕುರಿತು.

**ಓದಲಾಗಿದೆ :** ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪತ್ರ ಸಂಖ್ಯೆ: 195/ಹೆಚ್‌ಆರ್‌ಎಂ-2(1)/2020-21, ದಿನಾಂಕ:11.09.2024.

****

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿಮಾಡಿಕೊಳ್ಳಲು ಅವಕಾಶವಿದ್ದು, ಸದರಿ ಹುದ್ದೆಗಳಿಗೆ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಪೂರಕವಾಗುವಂತೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರತ್ಯೇಕವಾದ ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಗಳ ಮಾನದಂಡಗಳನ್ನು ನಿಗದಿಪಡಿಸಲಾಗಿರುತ್ತದೆ ಹಾಗೂ ನಿಗದಿತ ಮಾನದಂಡಗಳನ್ನು ಹೊಂದಿರುವ ಹಾಗೂ ಪರೀಕ್ಷೆಗಳನ್ನು ಉತ್ತೀರ್ಣರಾಗುವ ಅಭ್ಯರ್ಥಿಗಳನ್ನು ಸಂಬಂಧಪಟ್ಟ ಆಯ್ಕೆ ಪ್ರಾಧಿಕಾರಗಳು ಆಯ್ಕೆ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 179 ಸೇನೆನಿ 2020, ದಿನಾಂಕ:06.07.2021 ರಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು-1977ರ ನಿಯಮ 9ಕ್ಕೆ ಉಪನಿಯಮ "ಡಿ" ನ್ನು ಸೇರ್ಪಡೆಗೊಳಿಸಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದಲೂ ಶೇಕಡ 01 ರಷ್ಟು ಹುದ್ದೆಗಳನ್ನು ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ ಹಾಗೂ ಸದರಿ ವರ್ಗದ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಪೂರಕವಾಗುವಂತೆ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 179 ಸೇನೆನಿ 2020 ದಿನಾಂಕ 17.07.2021ರಲ್ಲಿ ಸಮತಳ ಮೀಸಲಾತಿಯಲ್ಲಿ ರೋಸ್ಟರ್ ಬಿಂದುವನ್ನು ಗುರುತಿಸಿ ಆದೇಶಿಸಲಾಗಿದೆ. ಸದರಿ ಅದೇಶದಂತೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ತೃತೀಯ ಲಿಂಗದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕಾದಲ್ಲಿ ಸದರಿಯವರುಗಳಿಗೆ ಪ್ರತ್ಯೇಕವಾದ ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಗಳಿಗೆ ಮಾನದಂಡಗಳನ್ನು ನಿಗದಿಪಡಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಕ್ರೀಡಾ ಮೀಸಲಾತಿಯಡಿಯಲ್ಲಿ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಪೂರಕವಾಗುವಂತೆ ಪ್ರತ್ಯೇಕವಾದ Karnataka State Police Services (Direct Recruitment of Meritorious Sportspersons to the cadres of police constables, Sub-Inspectors of Police and Deputy Superintendent of Police) (Special) Rules-2020 ಅನ್ನು ರೂಪಿಸಿರುವಂತೆ ಕರ್ನಾಟಕ ಪೊಲೀಸ್ ಇಲಾಖೆಯಲ್ಲಿನ ಕೆಎಸ್‌ಆರ್‌ಪಿ (ಐಆರ್‌ಬಿ ಒಳಗೊಂಡಂತೆ) ಸಶಸ್ತ್ರ, ಮೀಸಲು (ಕೆಎಆರ್‌ಪಿ ಒಳಗೊಂಡಂತೆ) ಹಾಗೂ ಕೆಎಸ್‌ಐಎಸ್‌ಎಫ್‌ನ ಹುದ್ದೆಗಳಿಗೆ ಹೊರತುಪಡಿಸಿ ಉಳಿದ ಹುದ್ದೆಗಳಿಗೆ ಮಾತ್ರ ತೃತೀಯ ಲಿಂಗದ ಅಭ್ಯರ್ಥಿಗಳನ್ನು ನೇಮಕಮಾಡಲು ಪೂರಕವಾಗುವಂತೆ ಪ್ರತ್ಯೇಕವಾಗಿ ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಗಳ ಮಾನದಂಡವನ್ನು ಈ ಕೆಳಗಿನಂತೆ ರೂಪಿಸಲು ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

...2

1. ದೇಹದಾರ್ಢ್ಯತೆ ಪರೀಕ್ಷೆ ಮಾನದಂಡವು ಈ ಕೆಳಕಂಡಂತೆ ಇರುತ್ತದೆ.

| HEIGHT | WEIGHT |
|---|---|
| 157 CMS | 45Kgs |

2. ಸಹಿಷ್ಣುತೆ ಪರೀಕ್ಷೆ ಮಾನದಂಡವು ಈ ಕೆಳಕಂಡಂತೆ ಇರುತ್ತದೆ.

| RUN | LONG JUMP | HIGH JUMP | SHOT PUT |
|---|---|---|---|
| 400Mtrs. Run in not more than 2 minutes | Not less than 2.50 mtrs. | Not less than 0.90 mtrs. | 4 kg not less Than 3.75 mtrs. |

**Note:**

- **Long Jump or High Jump:** Candidates may choose either one or both the jumps but must atleast qualify in either of the Jumps (in maximum 3 chances)
- **Shot Put**: *in maximum 3 chances.*
- Candidates have to qualify in all the above three tests in the chronological order.

ಸದರಿ ವಿಶೇಷ ನಿಯಮಾವಳಿಗಳನ್ನು ರೂಪಿಸುವವರೆಗೂ ಅಥವಾ ಈ ಕುರಿತು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿಮಾಡುವವರೆಗೂ ನೇಮಕಾತಿಗೆ ಅನುಮೋದನೆ ಆಗಿರುವ ಹುದ್ದೆಗಳಿಗೆ ತೃತೀಯ ಲಿಂಗದ ಮೀಸಲಾತಿಯನ್ನು ಅಳವಡಿಸದೇ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸರ್ಕಾರದ ಅನುಮತಿಯನ್ನು ನೀಡುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 155 ಪಿಪಿಎ 2024, ಬೆಂಗಳೂರು ದಿನಾಂಕ: 10 .10.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯಲ್ಲಿನ ಕೆಎಸ್‌ಆರ್‌ಪಿ (ಐಆರ್‌ಬಿ ಒಳಗೊಂಡಂತೆ) ಸಶಸ್ತ್ರ ಮೀಸಲು (ಕೆಎಆರ್‌ಪಿ ಒಳಗೊಂಡಂತೆ) ಹಾಗೂ ಕೆಎಸ್‌ಐಎಸ್‌ಎಫ್‌ನ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಹುದ್ದೆಗಳಿಗೆ ಮಾತ್ರ ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಗಳ ಮಾನದಂಡವನ್ನು ನಿಗದಿಪಡಿಸಿ ಆದೇಶಿಸಿದೆ.

1. ದೇಹದಾರ್ಢ್ಯತೆ ಪರೀಕ್ಷೆ ಮಾನದಂಡವು ಈ ಕೆಳಕಂಡಂತೆ ಇರುತ್ತದೆ.

| HEIGHT | WEIGHT |
|---|---|
| 157 CMS | 45Kgs |

2. ಸಹಿಷ್ಣುತೆ ಪರೀಕ್ಷೆ ಮಾನದಂಡವು ಈ ಕೆಳಕಂಡಂತೆ ಇರುತ್ತದೆ.

| RUN | LONG JUMP | HIGH JUMP | SHOT PUT |
|---|---|---|---|
| 400Mtrs. Run in not more than 2 minutes | Not less than 2.50 mtrs. | Not less than 0.90 mtrs. | 4 kg not less Than 3.75 mtrs. |

Note:

- **Long Jump or High Jump:** Candidates may choose either one or both the jumps but must atleast qualify in either of the Jumps (in maximum 3 chances)
- **Shot Put**: in maximum 3 chances.
- Candidates have to qualify in all the above three tests in the chronological order.

ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಪ್ರತ್ಯೇಕವಾಗಿ ತಿದ್ದುಪಡಿಯನ್ನು ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Shyama 10/10/15
(ಜಿ. ಶ್ಯಾಮಹೊಳ್ಳ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಬಿ)

ಇವರಿಗೆ,

1. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ, ಬೆಂಗಳೂರು.
2. ಹೆಚ್ಚುವರಿ ಮಹಾನಿರ್ದೇಶಕರು (ಆಡಳಿತ) ಪೊಲೀಸ್ ಪ್ರಧಾನ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು.
3. ಹೆಚ್ಚುವರಿ ಮಹಾನಿರ್ದೇಶಕರು (ನೇಮಕಾತಿ) ಕಾರ್ಲ್‌ಟನ್ ಭವನ ಅರಮನೆ ರಸ್ತೆ, ಬೆಂಗಳೂರು.

ಪ್ರತಿಗಳು,

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ವಿಶೇಷ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು) ಇವರ ಆಪ್ತ ಕಾರ್ಯದರ್ಶಿ.
3. ಕಡತದ ಪ್ರತಿ/ಹೆಚ್ಚುವರಿ ಪ್ರತಿಗಳು /ಶಾಖಾ ರಕ್ಷೆ ಕಡತ